ಕರ್ನಾಟಕ ವಿಧಾನಸಭೆ

ಹದಿನಾಲ್ಕನೇ ವಿಧಾನಸಭೆ

ಹನ್ನೆರಡನೇ ಅಧಿವೇಶನ

ಕಾರ್ಯಕಲಾಪಗಳ ಪಟ್ಟಿ

ಮಂಗಳವಾರ, ದಿನಾಂಕ 22ನೇ ನವೆಂಬರ್, 2016

(ಸಮಯ: ಬೆಳಗ್ಗೆ: 11.00 ಗಂಟೆ)

-----

1. ಪ್ರಶ್ನೋತ್ತರ

ಅ) ಸದನದಲ್ಲಿ ಉತ್ತರಿಸುವ ಪ್ರಶ್ನೆಗಳು : ಎರಡನೇ ಪಟ್ಟಿ

ಆ) ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು : ಎರಡನೇ ಪಟ್ಟಿ

2. ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು

1. **ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಗಳು) ಅವರು:–**

   ಭಾರತ ಸಂವಿಧಾನದ 151 (2)ನೇ ಅನುಚ್ಛೇದದ ಮೇರೆಗೆ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ನೀಡಿರುವ 2015–16ನೇ ಸಾಲಿನ ಧನ ವಿನಿಯೋಗ ಲೆಕ್ಕಗಳು ಮತ್ತು ಹಣಕಾಸು ಲೆಕ್ಕಗಳನ್ನು (ಭಾಗ–1 ಮತ್ತು ಭಾಗ–2) ಸಭೆಯ ಮುಂದಿಡುವುದು.

2. ಸದಸ್ಯರಿಗೆ ಪ್ರತ್ಯೇಕವಾಗಿ ಕಳುಹಿಸಲಾಗಿರುವ ಒಂದನೇ ಪಟ್ಟಿಯ ರೀತ್ಯಾ.

3. ಅರ್ಜಿಗಳನ್ನೊಪ್ಪಿಸುವುದು

ಶ್ರೀ ಎನ್.ಹೆಚ್. ಶಿವಶಂಕರ ರೆಡ್ಡಿ (ಉಪ ಸಭಾಧ್ಯಕ್ಷರು ಹಾಗೂ ಅಧ್ಯಕ್ಷರು ಅರ್ಜಿಗಳ ಸಮಿತಿ) ಅವರು – ಈ ಕೆಳಕಂಡ ಅರ್ಜಿಗಳನ್ನು ಒಪ್ಪಿಸುವುದು.

1. ಸರ್ವೆ ನಂ.376ರಲ್ಲಿ 2–08 ಗುಂಟೆ ಸರ್ವೆ ನಂ.410 ರಲ್ಲಿ 1–09 ಗುಂಟೆ ಸರ್ಕಾರಿ ಜಮೀನನ್ನು ಚನ್ನಪಟ್ಟಣ ತಾಲ್ಲೂಕು, ಕಸಬಾ ಹೋಬಳಿ, ಮಂಗಳವಾರ ಪೇಟೆ, ಚಿಕ್ಕನದೊಡ್ಡಿ ಗ್ರಾಮದಲ್ಲಿ ಸಮುದಾಯ, ಗ್ರಂಥಾಲಯ, ವಾಟರ್ ಟ್ಯಾಂಕ್, ಶಾಲೆ, ಹಾಲಿನ ಡೈರಿ, ಸಂಘ ಹಾಗೂ ಆಟದ ಮೈದಾನಕ್ಕೆ ಮಂಜೂರು ಮಾಡಿ ಕೊಡುವ ಬಗ್ಗೆ.

2. ಮಹಾಲಕ್ಷ್ಮೀಪುರದಲ್ಲಿರುವ ಪದ್ಮಭೂಷಣ ಡಾ॥ ಎಂ.ಸಿ. ಮೋದಿ ಕಣ್ಣಿನ ಆಸ್ಪತ್ರೆಯನ್ನು ಸರ್ಕಾರದ ವಶಕ್ಕೆ ಪಡೆಯುವ ಬಗ್ಗೆ.

3. ಹಾಸನ ತಾಲ್ಲೂಕು, ಕಸಬಾ ಹೋಬಳಿ, ದೇವರಾಯಪಟ್ಟಣ ಗ್ರಾಮದ ಸರ್ವೆ ನಂ.19ರಲ್ಲಿನ ಆದಿ ಕರ್ನಾಟಕ ಜನಾಂಗಕ್ಕೆ ಸೇರಿದವರ ಜಮೀನನ್ನು ಮಾರಾಟ ಮಾಡುತ್ತಿರುವ ಬಗ್ಗೆ.

4. 2014-15ನೇ ಸಾಲಿನ ತರಿಕೆರೆ ತಾಲ್ಲೂಕು ಪಂಚಾಯಿತಿಯ ವಿವಿಧ ಯೋಜನೆಗಳಡಿ ಕೈಗೊಂಡ ಕಾಮಗಾರಿಗಳಿಗೆ ಅನುದಾನದ ಮೊತ್ತ ರೂ. 1,11,51,000/-ಗಳ ವೆಚ್ಚ ಭರಿಸಲು ಅನುಮತಿ ದೊರಕಿಸಿಕೊಡುವ ಬಗ್ಗೆ.

5. ಹಾಸನ ತಾಲ್ಲೂಕು, ಕಸಬಾ ಹೋಬಳಿ, ಚಿಕ್ಕಹೊನ್ನೇನಹಳ್ಳಿ ಗ್ರಾಮ ಸರ್ವೆ ನಂ.58/2ಎರಲ್ಲಿ ಪ್ರಶಾಂತಿ ಸೇವಾ ಟ್ರಸ್ಟ್ (ರಿ) ಹಾಸನ, ಇವರಿಗೆ ಮಂಜೂರಾಗಿರುವ ನಿವೇಶನವನ್ನು ಭೂ-ಮಾಫಿಯಾದವರು ಅತಿಕ್ರಮಿಸಿಕೊಂಡಿರುವುದನ್ನು ತೆರವುಗೊಳಿಸುವ ಬಗ್ಗೆ.

6. ಬೀದರ್ ಜಿಲ್ಲೆಯ ಕಾರಂಜಾ ನೀರಾವರಿ ಯೋಜನೆಯಲ್ಲಿ ಭೂಮಿ ಹಾಗೂ ಮನೆ ಕಳೆದುಕೊಂಡ ರೈತರಿಗೆ ಪರಿಹಾರ ಹಾಗೂ ಮೂಲಭೂತ ಸೌಕರ್ಯ ಒದಗಿಸಿಕೊಡುವ ಬಗ್ಗೆ.

7. ಉತ್ತರ ಕನ್ನಡ ಜಿಲ್ಲೆ, ಗಾಂಧಿನಗರ ಮುಂಡಗೋಡ ಲೋಟಸ್ ಶಿಕ್ಷಣ ಸಂಸ್ಥೆ(ರಿ) "ಲೋಟಸ್" ಬಾಲಕಿಯರ ಪ್ರೌಢಶಾಲೆ (ಅನುದಾನಿತ)ಗೆ ಸಿಗಬೇಕಾದ ಎಲ್ಲಾ ಸವಲತ್ತುಗಳನ್ನು ಒದಗಿಸುವ ಬಗ್ಗೆ.

8. ಕೆ.ಜಿ.ಎಸ್.(ಜ್ಯೇಷ್ಠತೆ) ನಿಯಮಗಳು 1957ರ 5(1) (ಬಿ) ಅನ್ವಯ ಮೆರಿಟ್ ಆಧಾರದ ಮೇಲೆ ಜ್ಯೇಷ್ಠತೆ ನೀಡುವ ಕುರಿತು.

9. ತುಮಕೂರು ಉತ್ತರ ಜಿಲ್ಲೆ, ಮಧುಗಿರಿ ತಾಲ್ಲೂಕು, ಅಪ್ಪನಹಳ್ಳಿ ಬಡವನಹಳ್ಳಿಯ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗೆ ಹೊಸದಾಗಿ ಶಾಲಾ ಕೊಠಡಿಗಳನ್ನು ನಿರ್ಮಾಣ ಮಾಡುವ ಬಗ್ಗೆ.

10. ಹೆಬ್ಬಾಳ ವಿಧಾನಸಭಾ ಕ್ಷೇತ್ರದ ವಾರ್ಡ್ ನಂ.21ರ ಕುಂತಿ ಗ್ರಾಮದ ಸರ್ವೆ ನಂ.110 ರಲ್ಲಿ ವಾಸಿಸುತ್ತಿರುವ ಎ ಮತ್ತು ಬಿ ಬ್ಲಾಕಿನ ನಿವಾಸಿಗಳಿಗೆ ಹಕ್ಕು ಪತ್ರಗಳನ್ನು ನೀಡುವ ಬಗ್ಗೆ.

11. ಆನೇಕಲ್ ತಾಲ್ಲೂಕು ಹುಲಿಮಂಗಲ ಗ್ರಾಮದ ಸರ್ವೆ ನಂ.350-155 ಮತ್ತು 156ರ ಸರ್ಕಾರಿ ಜಮೀನುಗಳನ್ನು ಅಕ್ರಮವಾಗಿ ಬೆಂಗಳೂರು ಪ್ರಾಧಿಕಾರ ವ್ಯಾಪ್ತಿಯಲ್ಲಿ ಉಪಯೋಗಿಸುತ್ತಿರುವ ಬಗ್ಗೆ.

4. ರಾಜ್ಯದಲ್ಲಿ ಬರಗಾಲ ಮತ್ತು ಕುಡಿಯುವ ನೀರಿನ ಸಮಸ್ಯೆ ಬಗ್ಗೆ- ವಿಶೇಷ ಚರ್ಚೆ

ಎಸ್. ಮೂರ್ತಿ
ಕಾರ್ಯದರ್ಶಿ(I/c)